ಕೊಡ್ತೇನೆ. ಆದ್ರೆ ನಾ ಬಿದ್ದಿದ್ದಲ್ಲೇ ಜೀವಮಾನವಿಡೀ ಬಿದ್ದರ್‍ತೇನೆ. ನಂಗೆ ದೊಡ್ಡ ದೊಡ್ಡ ಮೇಳದವರು ರಾಜಮರ್ಯಾದೆ ಕೊಟ್ಟು ಕರೀತಾರೆ ಅಂತೆಲ್ಲಾ ದೊಡ್ಡಸ್ತಿಕೆ ಇದ್ರೆ ಇಲ್ಲೇ ಬಿದ್ದಿರು. ಪ್ರತಿಷ್ಠೆ, ಅಹಂ, ಎಲ್ಲವನ್ನೂ ಬಿಟ್ಟು ಹೊಸ ಮನಷ್ಯನಾಗೋ ಆಸೆ ಇದ್ರೆ ಬಾ' ಎಂದು ಅಣ್ಣಪ್ಪ ನಾಯ್ಕರು ಗಿರಿಧರನಿಗೆ ಸವಾಲು ಹಾಕಿದರು.

ತಗೋ ಎಂದು ಆಟದ ಕರಪತ್ರವೊಂದನ್ನು ಅವನಿಗೆ ಕೊಟ್ಟು, 'ನಾನಿನ್ನು ಬರ್‍ತೇನೆ ಗಿರಿಧರ' ಎನ್ನುತ್ತ ನಡೆದುಬಿಟ್ಟರು. ಗಿರಿಧರ ಮಾತ್ರ ಬಹುಹೊತ್ತು ಅವರು ನಡೆದುಹೋಗುವುದನ್ನು ನೋಡುತ್ತ, ಅವರು ಮೊದಲು ತನ್ನನ್ನು ರಂಗಕ್ಕೇರಿಸಿದ್ದನ್ನು ನೆನೆಯುತ್ತ ನಿಂತ, ಆಟದ ಕರಪತ್ರವನ್ನು ಬೆಳಕಿಗೊಡ್ಡಿ ನೋಡಿದಾಗ, 'ಕೃಷ್ಣ ದೇವರಾಯ' ಐತಿಹಾಸಿಕ ಪ್ರಸಂಗ ಎಂದು ಬರೆದದ್ದು ಕಣ್ಣಿಗೆ ರಾಚಿತು. ಒಮ್ಮೆಲೇ ಆ ಪ್ರಸಂಗದ 'ನಮನ ವಿರೂಪಾಕ್ಷ ಶಶಿಶೇಖರ...' ಪದ್ಯ ಅವನೊಳಗಿನಿಂದ ನೀರ ಒಸುರು ಉಕ್ಕುವಂತೆ ಲೀಲಾಜಾಲವಾಗಿ ಉಕ್ಕಿದಾಗ ನಿಜಕ್ಕೂ ರೋಮಾಂಚಿತನಾದ.

'ಎಂತ ನಾಯ್ಕರೆ ನಿಮ್ಮ ಆಟಕ್ಕೇ ನೀವು ಕೂತ್ಕೊಳ್ಳೇಬಾರ್ದು ಓಡಾಡ್ತಾ ಇರ್ಬೇಕು ಅಂತೇನಾದ್ರೂ ಶಪಥ ಮಾಡಿದ್ದೀರಾ ಎಂತ?' ಎಂದು ಸೀತಾರಾಮ ಮಾಸ್ಟ್ರು, ಅಣ್ಣಪ್ಪ ನಾಯ್ಕರು ಆಚೀಚೆ ತಿರುಗುತ್ತಿರುದನ್ನು ನೋಡಿ ಕೇಳಿದರೂ, ಗಿರಿಧರ ಬರ್‍ತಾನೋ ಇಲ್ವೋ, ಹಾಳಾದ ಕುಡಿತದ ಚಟ ಅವನನ್ನು ಯಾವಾಗ ಬಿಡುದು, ಕುಡ್ದು ಬಿದ್ದಿರ್ಬೇಕು ಅಂತೆಲ್ಲಾ ನೂರಾರು ಪ್ರಶ್ನೆಗಳಿಗೆ ತಾವೇ ಏನೇನೋ ಉತ್ತರ ಕಂಡು ಕೊಳ್ಳುತ್ತಿದ್ದ ನಾಯಕ್ರಿಗೆ ಅವ್ಯಾವುದೂ ಕೇಳಿಸಲಿಲ್ಲ.

ಅವರು ದಾರಿಯುದ್ದಕ್ಕೂ ನಿರುಕಿಸುತ್ತಾ ನಿರುತ್ತರರಾಗಿ ನೋಡುತ್ತಲೇ ಇದ್ದರು. ಅಷ್ಟೊತ್ತಿಗೆ ಮೇಳದ ಯಜಮಾನರಾದ ಮೂಲೆಮನೆ ರಾಮಾಚಾರಿ, 'ಎಂತ ನಾಯಕ್ರೆ, ಆಗದಿಂದ ಸುಮ್ನೆ ಶತಪಥ ಹಾಕ್ತೀರಿ? ಬನ್ನಿ ಇಲ್ಲಿ ಅಲ್ಲಿ ನೋಡಿ' ಎಂದು ರಂಗದತ್ತ ಕೈ ಮಾಡಿ ತೋರಿಸಿ ನಕ್ಕ. ಅಲ್ಲಿ ಭಾಗವತರ ಜಾಗದಲ್ಲಿ ಕೂತಿದ್ದ ಗಿರಿಧರ ಮಿಂಚಿನಂತೆ ಹೊಳೆಯುತ್ತಿದ್ದ. ನಾಯ್ಕರು ಮೂಕರಾದರು.

'ಇವನ್ಯಾವಾಗ ಬಂದ, ನಾನೆಲ್ಲಿದ್ದೆ? ನಿಜಕ್ಕೂ ಇವನು ಗಿರಿಧರನೆಯಾ? ಎಂದು ಒಂದಿಷ್ಟೂ ನಂಬಲಾರದೇ, ಏನಿದು ಎನ್ನುವಂತೆ ರಾಮಾಚಾರಿಯ ಮುಖ ನೋಡಿದರು. ಅವನು ನಂಗೆಲ್ಲವೂ ಗೊತ್ತು ಎನ್ನುವಂತೆ ನಗುತ್ತ, 'ಬನ್ನಿ ಬನ್ನಿ ನಾನೂ ಭಾಗವತರ ಪದ್ಯ ಕೇಳ್ಬೇಕೀಗ' ಎಂದು ನಾಯ್ಕರನ್ನು ಮುಂಬದಿಯ ಸೀಟಿನತ್ತ ಎಳೆದುಕೊಂಡೇ ಹೋದ.

ಮೀಸೆ ಗಡ್ಡವೆಲ್ಲಾ ಆಕರ್ಷಕವಾಗಿ ಟ್ರಿಮ್ ಮಾಡಿಸಿ, ಆಕಾಶದಷ್ಟೇ ಶುಭ್ರವಾದ ಬೆಳ್ಳನೆಯ ಅಂಗಿ, ಪಂಚೆ, ಶಲ್ಯ ಕೆಂಪಗಿನ ಮುಂಡಾಸು ತೊಟ್ಟು, 'ನಿಮಗೆ ನಾನು ಅಚ್ಚರಿ ಕೊಟ್ಟೆ, ಆದ್ರೆ ಇದು ನಿಮಗೋಸ್ಕರವೇ ಎನ್ನುವಂತೆ' ನಾಯ್ಕರನ್ನು ನೋಡಿ ರಂಗದಿಂದ ಎದೆ ತುಂಬಿ ನಕ್ಕ ಗಿರಿಧರ. ಅವನ ಶುಭ್ರ ನಗು, ಸೀತಾನದಿಯಂತಹ ಮಿನುಗು ನೋಡಿದ್ದೇ, ನಾಯ್ಕರಿಗೆ ಧುತ್ತೆಂದು ಆಕಾಶದ ತುಣುಕೊಂದು ಧರೆಗುರುಳಿ ಮಾಯಾಲೋಕವಾಗಿದೆ, ಗಿರಿಧರನೇ ಚಂದಿರ ಎನ್ನುವಂತೆ ಭಾಸವಾಯಿತು.

ನದಿಯ ಮೇಲೊಂದು ಎಲೆ ಬಿದ್ದು ಅದು ಸಣ್ಣಗೆ ನಲಿದು ಸದ್ದು ಮಾಡಿದ ಹಾಗೆ, ಅವನೊಳಗೆ ಸ್ವರಗಳು ನಲಿಯತೊಡಗಿದವು. ರಂಗದಲ್ಲಿ ಕೃಷ್ಣದೇವರಾಯನ ಪಾತ್ರ ಮತ್ತೆ ಪ್ರವೇಶವಾಗುತ್ತಿದ್ದಂತೆಯೇ ಅವನ ಸ್ವರದ ನದಿ ಸಣ್ಣಗೇ ಹರಿದು ಹರಿದು ಅರಬ್ಬಿಯ ಕಡೆಗೆ ಓಡಿದಂತೆ ರಂಗೇರತೊಡಗಿದವು. ಎದುರು ಕೂತವರ ಎದೆಯೊಳಗೆ ಈವರೆಗೂ ಆಗದ ವಿಚಿತ್ರ ಕಂಪನವಾಗಿ ಅವರು ತೇಲುತ್ತ ನಲಿಯುತ್ತ, 'ನಾಯ್ಕರೆ ಈ ಹೊಸ ಭಾಗವತರು ಯಾರು? ಎಲ್ಲಿಂದ ಕರ್‍ಕೊಂಡು ಬಂದ್ರಿ, ಎಂಥ ಸ್ವರ ಮಾರ್‍ರೆ' ಎಂದು ಹುಬ್ಬೇರಿಸಿದರು. ಗಿರಿಧರನ ಈ ಸ್ವರಕ್ಕೆ 'ಹೌದು ಆ ಹಳೆಯ ಭಾಗವತ ಸತ್ತು, ಹೊಸ ಭಾಗವತನೇ ಹುಟ್ಟಿಕೊಂಡ' ಎನ್ನುವಂತೆ ನಾಯ್ಕರು ಪಾತ್ರದಲ್ಲೇ ಲೀನವಾಗಿ ಹಾಡುತ್ತಿದ್ದ ಗಿರಿಧರನನ್ನೇ ಸಂತೃಪ್ತಿಯಿಂದ ನೋಡಿದರು. ಆಕಾಶದಲ್ಲಿ ಮೋಡವೆಲ್ಲಾ ಕರಗಿ ಶುಭ್ರ ಚಂದಿರನ ಬೆಳಕು ಡೇರೆಯಿಂದ ಒಳಗೆ ಹರಿದು, ರಂಗದ ಕೃತಕ ಬೆಳಕಿನ ನಡುವೆಯೂ ಪ್ರಕಾಶಮಾನವಾಗಿ ಡೇರೆಯೇ ಹೊಸ ಭರವಸೆಯಿಂದ ಬೆಳಗಿದಂತಾಯ್ತು.

●

